





ಉಳಿ, ಸುತ್ತಿಗೆ, ಸ್ಕ್ರೂಡ್ರೈವರ್ ಹಿಡಿದು ಕುಳಿತರೆ ನಾಲ್ಕೈದು ಗಂಟೆ ಕಾಲ ಸತತವಾಗಿ ಕೊರಡುಗಳ ಕೆತ್ತನೆ ಮಾಡುತ್ತಾರೆ. ತದೇಕಚಿತ್ತದಿಂದ ಕಾಫಿ ಬೊಡ್ಡೆಯ ಕೊರಡನ್ನು ಕೊರೆದು ಅದಕ್ಕೆ ಪೈನ್ ಮರದ ಮುದುಡಿದ ಮೊಗ್ಗುಗಳನ್ನು ಮುಡಿಸಿ, ಆ ಮೊಗ್ಗುಗಳನ್ನು ಅರಳಿಸಿ ಅಂದಗೊಳಿಸುತ್ತಾರೆ. ಕಚ್ಚಾ ವಸ್ತುಗಳು ಕೆಲವೇ ಗಂಟೆಗಳಲ್ಲಿ ಕಿಲಕಿಲ ನಗುತ್ತವೆ.

ವಿವಿಧ ರೂಪ ಪಡೆದ ಕೊರಡುಗಳಿಗೆ ಹೊಳಪು ಕೊಡುವ ಕೆಲಸ ಬಾಬುಲಾಲ್ ಅವರ ಪತ್ನಿ ಖೈರುನ್ನೀಸಾ ಅವರದ್ದು. ತಮ್ಮ ಪತಿ ಸಿದ್ದಪಡಿಸಿದ ವಸ್ತುಗಳಿಗೆ ಖೈರುನ್ನೀಸಾ ಹದವಾಗಿ ಬಣ್ಣ ಹಚ್ಚಿ ಮತ್ತಷ್ಟು ಆಕರ್ಷಕಗೊಳಿಸುತ್ತಾರೆ. ಬ್ರಷ್ ಹಿಡಿದು ರಂಗು ತುಂಬುತ್ತಾರೆ. ಒಣಗಿದ ಕಟ್ಟಿಗೆಯಂತೆ ಬಿದ್ದಿದ್ದ ಪೈನ್ ಮರದ ಟೊಂಗೆ ಈ ದಂಪತಿಗಳ ಕೈಯಲ್ಲಿ ವಿಶಿಷ್ಟ ರೂಪ ಪಡೆದು ಜೀವವೇ ಬಂದಂತೆ ಶೋಭಿಸುತ್ತವೆ.

**ಕೊಂಬಿನ ಕಲೆ:** ಈ ಕುಟುಂಬ ಜಾನುವಾರುಗಳ ಕೊಂಬುಗಳಲ್ಲಿ ಬಗೆ ಬಗೆಯ ಅಲಂಕಾರಿಕ ವಸ್ತುಗಳನ್ನು ಸಿದ್ದಪಡಿಸುವ ಕಲೆಯನ್ನೂ ಕರಗತ ಮಾಡಿಕೊಂಡಿದೆ. ಮರಟಿರುವ ಕೊಂಬುಗಳನ್ನು ಕಾಯಿಸಿ, ಬಗ್ಗಿಸಿ, ತಿದ್ದಿ ತೀಡಿ ಬೇಕಾದ ಆಕಾರಕ್ಕೆ ತರಲಾಗುತ್ತದೆ. ಮೀನು, ಕೊಕ್ಕರೆ, ದೋಣಿ ಇತರ ಮಾದರಿಗಳನ್ನು ರೂಪಿಸಿ ಮಾರಾಟ ಮಾಡುತ್ತದೆ.

‘ಸಕಲೇಶಪುರದಿಂದ ಉದುರಿದ ಪೈನ್ ಮರದ ಕೊರಡುಗಳನ್ನು ತರುತ್ತೇವೆ. ನಾಗಮಂಗಲದ ಮೂಳೆ ಕಾರ್ಖಾನೆಯಿಂದ ಜಾನುವಾರುಗಳ ಕೊಂಬುಗಳನ್ನು ಆಯ್ದು ತರಲಾಗುತ್ತದೆ. ಗ್ರಾಹಕರ ಮನಸ್ಸಿಗೆ ಒಪ್ಪುವಂತೆ ಅವುಗಳಿಗೆ ರೂಪ ನೀಡಿ ಮಾರಾಟ ಮಾಡುತ್ತೇವೆ. ನಮ್ಮ ಮನೆಯಲ್ಲಿ ಸಿದ್ದಪಡಿಸಿದ ಕೊರಡು ಮತ್ತು ಕೊಂಬಿನ ಅಲಂಕಾರಿಕ ವಸ್ತುಗಳನ್ನು ಊಟಿಯಲ್ಲೂ ಮಾರಾಟ ಮಾಡುತ್ತೇವೆ. 50 ವರ್ಷಗಳಿಂದ ನಾನು ಈ ಕುಶಲ ಕಲೆಯ ಕೆಲಸ ಮಾಡುತ್ತಿದ್ದೇನೆ. ನನ್ನ ಮಕ್ಕಳಿಗೂ ಇದು ಮುಖ್ಯ ಕಸುಬು’ ಎನ್ನುತ್ತಾರೆ ಬಾಬುಲಾಲ್. (ಸಂಪರ್ಕಕ್ಕೆ ಮೊ: 98804 91570)